

ಪೋಷಕಿ ವಿಕ್ಕಿ ಗ್ರೀನ್‌ಸ್ಲೇಡ್ ಜತೆಗೆ ಚಿತ್ರಕಾರ ಪೆಟ್ಟಿ



ಬಾಯಲ್ಲಿ ಕುಂಚ ಹಿಡಿದು ಚಿತ್ರ ಬಿಡಿಸುತ್ತಿರುವ ಪೆಟ್ಟಿ



ಪೆಟ್ಟಿ ಬಿಡಿಸಿದ ಚಿತ್ರ

# ಕತ್ತೆಯ ಕಲೆ!

ಕತ್ತೆಗೇನು ಗೊತ್ತು ಕಸ್ತೂರಿ ಗಂಧ ಎಂಬ ಮಾತಿದೆ. ಆದರೆ ಇದಕ್ಕೆ ಅಪವಾದ ಎಂಬಂತೆ ಈ ಚಿತ್ರದಲ್ಲಿರುವ ಕತ್ತೆ ಉತ್ತಮ ಕಲಾಕಾರನೆಂಬ ಪ್ರಶಂಸೆಯನ್ನು ಜನರಿಂದ ಗಳಿಸಿದೆ. ಈ ಕತ್ತೆ ಕುಂಚ ಹಿಡಿದು ಚಿತ್ರ ಬಿಡಿಸಲು ಅನುವಾದರೆ ನಾನಾ ಬಗೆಯ ಕಲಾಕೃತಿಗಳು ಹೊರ ಹೊಮ್ಮುತ್ತವೆ.

ಇದು ಬರೆದ ಚಿತ್ರವನ್ನು ಮೆಚ್ಚಿ ಖರೀದಿಸುವ ಕಲಾ ಪ್ರೇಮಿಗಳು ಹಲವರು. ಈವರೆಗೆ ಈ ಕತ್ತೆ ಬಿಡಿಸಿದ ಚಿತ್ರಗಳು ನೂರು ಪೌಂಡ್ ಗಳಿಸಿದೆಯಂತೆ!

ಇಂಗ್ಲೆಂಡಿನ ಔದ್ಯಮಿಕ ನಗರವೆಂದೇ ಪ್ರಸಿದ್ಧವಾದ ಬ್ರಿಸ್ಟಾಲ್ ನಗರದಲ್ಲಿರುವ ಈ ಹೆಣ್ಣು ಕತ್ತೆಯ ಹೆಸರು ಪೆಟ್ಟಿ. ಬಾಯಿಯಲ್ಲಿ ಬಣ್ಣ ಅದ್ದಿದ ಬ್ರಶ್ ಹಿಡಿದು ಕ್ಯಾನ್‌ವಸ್ ಮೇಲೆ ಕಲೆಯರಳಿಸುವ ಪೆಟ್ಟಿಗೀಗ 8 ವರ್ಷದ ಹರೆಯ.

ಇದನ್ನು ಪೋಷಿಸುತ್ತಿರುವ ವಿಕ್ಕಿ ಗ್ರೀನ್‌ಸ್ಲೇಡ್ ಕೂಡ ಕಲಾವಿದೆ. 'ನಾನು ಚಿತ್ರ ಬಿಡಿಸುವಾಗ ಪೆಟ್ಟಿ ಬಹಳ ಕುತೂಹಲದಿಂದ ಚಿತ್ರವನ್ನೇ ನೋಡುತ್ತಿತ್ತು. ಅದನ್ನು ಗುರುತಿಸಿದ ನಾನು ಕತ್ತೆಯ ಬಾಯಿಗೆ ಬಣ್ಣ ಅದ್ದಿದ್ದ ಕುಂಚವನ್ನು ಕೊಟ್ಟೆ. ಅದು ಕ್ಯಾನ್‌ವಸ್ ಮೇಲೆ ಏನೇನೋ ಗೀಚಿತು. ಅದು ನನಗೆ ಹಿಡಿಸಿತು. ಅದಕ್ಕೆ ಮೂರು ವಾರಗಳ ತರಬೇತಿ ನೀಡಿದೆ. ಪೆಟ್ಟಿ ತನ್ನ ತರಬೇತಿಯನ್ನು ಅತಿ ಶೀಘ್ರವಾಗಿ ಗ್ರಹಿಸಿತು' ಎಂದು ತನ್ನ ಪೆಟ್ಟಿಯ ಪ್ರತಿಭೆ ಕುರಿತು ಮೆಚ್ಚುಗೆಯ ಮಾತನಾಡುತ್ತಾಳೆ ವಿಕ್ಕಿ. ಅಂತೂ ಪೆಟ್ಟಿ ಎಂಬ ಕತ್ತೆ ಪೇಂಟರ್ ಆಗಿ ರೂಪುಗೊಂಡಿತ್ತು. ಜನರು ಅದರ ಪೇಂಟಿಂಗ್ಸ್‌ಗಳನ್ನು ಮೆಚ್ಚಿ ಖರೀದಿಸುತ್ತಾರಂತೆ. ಈಗ ಈ ಕತ್ತೆಯ ಕಲಾಕೃತಿಗಳು ಸುಪ್ರಸಿದ್ಧ ಬ್ರಿಸ್ಟಾಲ್ ಶಾಪಿಂಗ್ ಸೆಂಟರ್‌ನಲ್ಲಿ ಪ್ರದರ್ಶಿತಗೊಂಡು ಮಾರಾಟವಾಗುತ್ತಿದೆ.

ಏಳು ವರ್ಷಗಳ ಹಿಂದೆ ಈ ಪ್ರತಿಭಾವಂತ ಕತ್ತೆ ತೀರ ಅಶಕ್ತವಾಗಿ ಬದುಕುವುದೇ ಇಲ್ಲವೆಂಬ ಸ್ಥಿತಿಯಲ್ಲಿತ್ತಂತೆ. ಆಗ ಅದು ಅನಾಥ ಕತ್ತೆ-ಕುದುರೆಗಳ ಆಶ್ರಯ ತಾಣವಾದ ಹಾರ್ಸ್ ವರ್ಲ್ಡ್‌ನಲ್ಲಿ ಆಶ್ರಯ ಪಡೆದಿತ್ತು. ಅಲ್ಲಿ ಈಗ ಸುಮಾರು 400 ಪ್ರಾಣಿಗಳು ಪುನರ್ವಸತಿ ಪಡೆದಿದೆ. ಹಾರ್ಸ್ ವರ್ಲ್ಡ್‌ಗೀಗ ವಜ್ರ ಮಹೋತ್ಸವದ ಸಂಭ್ರಮ. ಈ ಸಂಭ್ರಮಾಚರಣೆಗೆ ಪೆಟ್ಟಿ ತನ್ನ ಕಲಾಭಿವ್ಯಕ್ತಿಯಿಂದ ಹೊಸ ಮೆರುಗು ನೀಡುತ್ತಿದೆ.

■ ಸುಭಾಸ ಯಾದವಾಡ